

# ಬಂಧವ ಬೆಸೆಯುವ ಬಹು ತರಹದ ರಾಖಿ

ರೂಪಾ ಕೆ.ಎಂ.

ಭ್ರಾತೃತ್ವವನ್ನು ಬೆಸೆಯುವ ಹಬ್ಬ ರಾಖಿ. ಸಂಕಷ್ಟ ಎದುರಾದಾಗ ಭದ್ರಕೋಟೆಯಂತೆ ನಿಲ್ಲಬಲ್ಲ ಅಣ್ಣಂದಿರಬೇಕು ಎಂಬ ಆಸೆ ಸಹಜವಾಗಿ ಹೆಣ್ಣುಮಕ್ಕಳದ್ದು. ಹಾಗೆಂದು ಅಣ್ಣ ಇಲ್ಲದಿದ್ದರೆ ಏನಾಯ್ತು?. 'ಬ್ರದರ್ ಫ್ರಂ ಅನದರ್ ಮದರ್' ಅಣ್ಣನಂತೆ ಪೊರೆಯುವ, ರಕ್ಷಿಸುವ, ಜತೆಗೆ ನಿಂತು 'ಯಾರು ಬರ್ತಾರೆ ನೋಡೋಣ ನಡಿ, ಏನಾಗುತ್ತೋ ನೋಡೋಣ ನಡಿ' ಎಂದು ಆಗಾಗ್ಗೆ ಹುರಿದುಂಬಿಸುವ ಗೆಳೆಯನಂಥ ಅಣ್ಣ ಇದ್ದರೆ ಬದುಕಿಗೆ ಇನ್ನೇನು ಬೇಕು?

ರಾಜಸೂಯ ಯಾಗದ ಸಂದರ್ಭದಲ್ಲಿ ಶಿಶುಪಾಲನ ಶಿರಚ್ಛೇದ ಮಾಡುವಾಗ ಗಾಯಗೊಂಡ ಶ್ರೀಕೃಷ್ಣನ ಬೆರಳಿಗೆ ದ್ರೌಪದಿ ತನ್ನ ಸೀರೆಯ ತುಂಡನ್ನು ಹರಿದು ಕಟ್ಟುತ್ತಾಳೆ. ಕಷ್ಟಕ್ಕೆ ಒದಗುವೆ ಎಂಬ ಅಭಯ ಇಟ್ಟ ಕೃಷ್ಣ ಪರಮಾತ್ಮ ಎನ್ನುತ್ತದೆ ಪುರಾಣ. ಬಂಗಾಳ ವಿಭಜನೆಯ ಸಂದರ್ಭದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ಹಿಂದೂ ಮತ್ತು ಮುಸ್ಲಿಂರ ನಡುವಿನ ಒಗ್ಗಟ್ಟನ್ನು ಉತ್ತೇಜಿಸಲು ಸಾಮೂಹಿಕ ರಕ್ಷಾ ಬಂಧನವನ್ನು ಆಯೋಜಿಸಿದ್ದರು ಎನ್ನುತ್ತದೆ ಇತಿಹಾಸ.

ದೂರದೂರಿನಲ್ಲಿ ನೆಲೆಸಿರುವ ಅಣ್ಣನಿಗೆ, ಅಣ್ಣನಂತೆ ಕಾಯುವ, ಪೊರೆಯುವ ಮನಸ್ಸಿಗೆ ಹಿಡಿಸುವ ರಾಖಿಗಳನ್ನು ಕಸ್ಟಮೈಸ್ಡ್ ಮಾಡಿ ಕಳಿಸುವ ಪದ್ಧತಿಯಂತೂ ಸದ್ಯಕ್ಕೆ ಹೆಚ್ಚುತ್ತಿದೆ.

**ಕ್ವಿಲ್ಲಿಂಗ್:** ಪೇಪರ್ ಕ್ವಿಲ್ಲಿಂಗ್ ಕಲೆಯನ್ನು ಬಳಸಿಕೊಂಡು ಕೈಯಿಂದ ತಯಾರಿಸಿದ ರಾಖಿಗಳಿವು. ಕಾಗದದ ತೆಳುವಾದ ಪಟ್ಟಿಗಳನ್ನು ವಿವಿಧ ಆಕಾರಗಳಾಗಿ ಸುತ್ತಿ ವಿನ್ಯಾಸ ಮಾಡಲಾಗುತ್ತದೆ. ಕಾಗದ ಮತ್ತು ಹತ್ತಿ ದಾರವನ್ನು ಬಳಸಿ, ಹೂವು, ವಿವಿಧ ಆಕಾರದಲ್ಲಿರುವ ಪ್ರಾಣಿಗಳು ಪಕ್ಷಿಗಳ ಚಿತ್ತಾರವನ್ನು ನೋಡಬಹುದು.

**ಫ್ಯಾಬ್ರಿಕ್:** ಸಾವಯವ ಹತ್ತಿ, ಸೆಣಬು, ರೇಷ್ಮೆ ಅಥವಾ ಮರುಬಳಕೆ ಮಾಡಬಹುದಾದ ಬಟ್ಟೆಯಿಂದ ರೂಪಿಸಿದ ರಾಖಿಗಳಿವು. ಪ್ಲಾಸ್ಟಿಕ್ ರಾಖಿಗಳಿಗಿಂತ ಭಿನ್ನ ಎನಿಸುವ, ಬಟ್ಟೆಯ ರಾಖಿಗಳು ಉತ್ತಮ ಆಯ್ಕೆಯಾಗಬಲ್ಲವು. ಪರಿಸರಸ್ನೇಹಿಯಷ್ಟೇ ಅಲ್ಲದೆ ಚರ್ಮಕ್ಕೂ ಆರಾಮ ಎನಿಸುವ ರಾಖಿಗಳಿವು. ನೈಸರ್ಗಿಕವಾಗಿ ಬಣ್ಣ ಬಳಿದ, ಕೈಯಿಂದ ನೂಲು ತೆಗೆದ ಸಾವಯವ ಹತ್ತಿಯಿಂದ ಮಾಡಿದ ರಾಖಿಗಳು ಹೆಚ್ಚು ಪ್ರಚಲಿತದಲ್ಲಿವೆ. ಇದಲ್ಲದೇ, ಚಾಂದೇರಿ ರೇಷ್ಮೆಯನ್ನು ಬಳಸಿ ಮಾಡಿದ ಹೂವು, ಗಾಢ ಬಣ್ಣದ ರಾಖಿಗಳು ಯುವಮನಸ್ಸನ್ನು ಆಕರ್ಷಿಸುತ್ತಿವೆ. ಸೆಣಬಿನ ರಾಖಿಗಳು ದೇಸೀತನದ ಪ್ರತಿಬಿಂಬವಾಗಿದ್ದು, ಮರದ ಮಣಿಗಳು, ಒಣಗಿದ ಹೂವುಗಳು, ತೆಂಗಿನ ಚಿಪ್ಪಿನ ಚೂರುಗಳನ್ನು ಬಳಸಿಯೂ ಮಾಡಲಾಗುತ್ತದೆ.

**ಫ್ಲವರ್:** ದೇಸೀ ಸಂಸ್ಕೃತಿಯಲ್ಲಿ ವಿಭಿನ್ನ ಹೂವುಗಳು ವಿಭಿನ್ನ ಅರ್ಥಗಳನ್ನು ಹೊರಡಿಸುತ್ತವೆ. ಕಮಲವು ಶುದ್ಧತೆಯ ಪ್ರತೀಕವಾದರೆ, ಸೂರ್ಯಕಾಂತಿ ಸಮೃದ್ಧಿಯನ್ನು ಸೂಚಿಸುತ್ತದೆ. ಮಲ್ಲಿಗೆ ಪ್ರೀತಿ ಹಾಗೂ ಸೌಂದರ್ಯದ ದ್ಯೋತಕ. ಇಂಥ ಹೂವಿನ ಚಿತ್ತಾರಗಳಿರುವ ರಾಖಿಯು ಮನಸ್ಸನ್ನು ಸೂರೆ ಮಾಡುತ್ತಿದೆ.

ಈಗೀಗ ಹೂವಿನ ರಾಖಿಯಲ್ಲಿ ಬೇರೆ ಬೇರೆ ಸಸಿಗಳ ಬೀಜವನ್ನು ಇಟ್ಟು ತಯಾರಿಸಲಾಗುತ್ತದೆ. ರಾಖಿ ಹಬ್ಬ ಮಳೆಗಾಲದಲ್ಲಿಯೇ ಬರುವುದರಿಂದ ಹಬ್ಬ ಮುಗಿದ ಮೇಲೆ ಈ ಬೀಜವನ್ನು ಮಣ್ಣಿನಲ್ಲಿ ಹಾಕಿ ಸಸಿಯಾಗುವುದನ್ನು ನೋಡಬಹುದು. ಸಸಿ ಚಿಗುರಿದರೆ ಅಣ್ಣ ತಂಗಿಯ ಬಾಂಧವ್ಯದ ಖುಷಿಯು ಇಮ್ಮಡಿಗೊಳ್ಳುತ್ತದೆ.

**ಕುಂದನ್:** ಕುಸುರಿ ಇರುವ ರತ್ನಗಳನ್ನು ಸೇರಿಸಿ ಮಾಡಿದ ಕುಂದನ್ ರಾಖಿಯು ತುಸು ದುಬಾರಿಯೂ ಹೌದು. ಕುಂದನ್ ಅಮೂಲ್ಯ ಮತ್ತು ಸಾಮಾನ್ಯ ಹರಳುಗಳನ್ನು ಹೊಂದಿಸಿ ಮಾಡಲಾಗುತ್ತದೆ. ದುಬಾರಿ ಲುಕ್ ನೀಡುತ್ತದೆ. ವಿವಿಧ ಬಗೆಯ ರತ್ನಗಳನ್ನು ಚಿನ್ನ ಅಥವಾ ಬೆಳ್ಳಿಯಲ್ಲಿ ಕಟ್ಟಿಸಲಾಗಿರುತ್ತದೆ. ಇದಲ್ಲದೇ ಸಾಮಾನ್ಯ ಕುಂದನ್ ವಿನ್ಯಾಸಗಳನ್ನು ಮೃದುವಾದ ಹತ್ತಿ, ರೇಷ್ಮೆ ದಾರಗಳಲ್ಲಿ ಕೂಡಿಸಲಾಗಿರುತ್ತದೆ. ಗಣೇಶ, ಲಕ್ಷ್ಮಿ, ಸರಸ್ವತಿ, ನವಿಲು, ಮೊಲ, ಆಮೆ, ಗೂಬೆಯಂಥ ವಿನ್ಯಾಸಗಳನ್ನು ನೋಡಬಹುದು.



**ಮಣಿಗಳು:** ಗಾಜಿನ ಮಣಿಗಳು, ಸ್ಫಟಿಕ ಮಣಿಗಳು, ಮರ ಸೇರಿ ವಿವಿಧ ಬಗೆಯ ಮಣಿಗಳನ್ನು ಬಾಳಿಕೆ ಬರುವಂಥ ದಾರಗಳನ್ನು ಬಳಸಿ ನೇಯ್ದು ರಾಖಿ ತಯಾರಿಸಲಾಗುತ್ತದೆ.

ಎಪೋಕ್ಸಿ ರೆಸಿನ್ ಬಳಸಿ ಮಾಡಿದ ರಾಖಿಯು ದೀರ್ಘಕಾಲ ಬಾಳಿಕೆ ಬರುತ್ತದೆ. ಗಾಢ ಎನಿಸುವ ಬಣ್ಣಗಳಲ್ಲಿ ಕಸ್ಟಮೈಸ್ಡ್ ಫೋಟೊಗಳನ್ನು ಬಳಸಬಹುದು. ಇದಲ್ಲದೇ, ಮಕ್ಕಳಿಗೆ ಇಷ್ಟವಾಗುವ ಕಾರ್ಟೂನ್‌ಗಳ ಪಾತ್ರಗಳ ವಿನ್ಯಾಸವನ್ನು ರೆಸಿನ್‌ನಲ್ಲಿ ಬಳಸಬಹುದು. ಕಲಾತ್ಮಕತೆಯನ್ನು ಬಿಂಬಿಸುವಂಥ ರಾಖಿಗಳಾಗಿರುತ್ತವೆ.

ಈಗೀಗ ಚಿನ್ನ ಹಾಗೂ ಬೆಳ್ಳಿಯಲ್ಲಿಯೂ ರಾಖಿಗಳು ಲಭ್ಯವಿದೆ. ಇವು ಸ್ವಲ್ಪ ದುಬಾರಿ ಎನಿಸುತ್ತವೆ. ಅಲ್ಲದೆ ಪ್ರತಿ ವರ್ಷ ಇಂಥ ರಾಖಿಗಳನ್ನು ಕಟ್ಟುವುದು ಹಣಕಾಸಿನ ದೃಷ್ಟಿಯಿಂದ ಹೊರೆಯಾಗಬಹುದು. ಆದರೆ, ಚಿನ್ನ ಮತ್ತು ಬೆಳ್ಳಿಯಲ್ಲಿ ಮಾಡಲಾದ ಹಗುರ ಎನಿಸುವ ವಿವಿಧ ಬಗೆಯ ಮೋಟಿಫ್‌ಗಳಿರುವ ರಾಖಿಗಳಿಗೆ ಉತ್ತಮ ಬೇಡಿಕೆ ಇದೆ.

ಸಂಬಂಧಗಳೆಲ್ಲ ಸಡಿಲವಾಗುತ್ತಿರುವ ಹೊತ್ತಿನಲ್ಲಿ, ಇರುವ ಮಿತಿಗಳನ್ನೇ ಲೆಕ್ಕ ಹಾಕುತ್ತ ಬಂಧ ಬೆಸೆದುಕೊಳ್ಳಲು ಹಿಂದು–ಮುಂದು ಯೋಚಿಸುತ್ತಿರುವ ಈ ಕಾಲಘಟ್ಟದಲ್ಲಿ ರಾಖಿ ಹಬ್ಬ ಎರಡೂ ವ್ಯಕ್ತಿಗಳ ನಡುವೆ ನವಿರು ಬಂಧ ಬೆಸೆಯುವುದಂತೂ ದಿಟ. ಅಂದ ಮೇಲೆ ಇನ್ನೂ ರಾಖಿ ಖರೀದಿ ಮಾಡಿಲ್ವ?.